**ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರಿನ ಮತ್ತು ಬೀದಿ ದೀಪಗಳ ವಿದ್ಯುತ್ ಬಿಲ್ ಪಾವತಿಗಾಗಿ ಬ್ಯಾಂಕ್‌ಗಳಲ್ಲಿ ಪ್ರತ್ಯೇಕ ಎಸ್ಕ್ರೋ ಖಾತೆಯನ್ನು ತೆರೆದಿರುವ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ&ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 07.04.2015 ರಂದು ಮಧ್ಯಾಹ್ನ 4.00 ಗಂಟೆಗೆ ನಡೆದ ಸಭೆಯ ನಡವಳಿ.**

---

**ಹಾಜರಿದ್ದವರು:**

ಅನುಬಂಧದಲ್ಲಿ ಲಗತ್ತಿಸಿದೆ.

ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಲಾಯಿತು.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾಜ್ ಇಲಾಖೆ ರವರು ಮಾತನಾಡಿ, ದಿನಾಂಕ 20.01.2015 ರಂದು ನಡೆದ ಸಚಿವ ಸಂಪುಟದ ನಿರ್ಣಯದನುಸಾರ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಬೀದಿ ದೀಪಗಳು ಮತ್ತು ಕುಡಿಯುವ ನೀರಿನ ಸ್ಥಾವರಗಳ ಚಾಲ್ತಿ ತಿಂಗಳುಗಳ ವಿದ್ಯುತ್ ಬಿಲ್ ಪಾವತಿಸಲು ರಾಜ್ಯ ಸರ್ಕಾರದಿಂದ ಬಿಡುಗಡೆಯಾಗುವ ಶಾಸನಬದ್ಧ ಅನುದಾನದ ಶೇ.60 ರಷ್ಟು ಹಾಗೂ ಕೇಂದ್ರ ಹಣಕಾಸು ಆಯೋಗದಿಂದ ಬಿಡುಗಡೆಯಾಗುವ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಹಾಗೂ ಸಾಮಾನ್ಯ ನಿರ್ವಹಣಾ ಅನುದಾನದ 25% ರಷ್ಟು ಮೊತ್ತವನ್ನು ಪ್ರತಿ ಗ್ರಾಮ ಪಂಚಾಯತಿಗಳಿಗೆ ಇದಕ್ಕಾಗಿ ಪ್ರತ್ಯೇಕವಾಗುವ ತೆರೆಯಲಾಗಿರುವ ಎಸ್ಕ್ರೋ ಖಾತೆಗಳಿಗೆ ಬಿಡುಗಡೆ ಮಾಡಲು ಈಗಾಗಲೇ ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ ಮತ್ತು ಈ ಕುರಿತು ಎಸ್.ಬಿ.ಎಂ.ನಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳು ಈಗಾಗಲೇ ಎಸ್ಕ್ರೋ ಖಾತೆಯನ್ನು ತೆರೆದಿರುತ್ತವೆ ಎಂದು ತಿಳಿಸಿದರು.

2. ಕಾರ್ಯದರ್ಶಿಗಳು (ಪಂ.ರಾಜ್) ರವರು ಮಾತನಾಡಿ, ಎಲ್ಲಾ ಗ್ರಾಮ ಪಂಚಾಯತಿಗಳು ಎಸ್ಕ್ರೋ ಖಾತೆಯನ್ನು ತೆರೆದಿದ್ದು, ವಿದ್ಯುತ್ ಬಿಲ್‌ನ್ನು ಗ್ರಾಮ ಪಂಚಾಯತಿಗಳಿಗೆ ಎಸ್ಕಾಂಗಳು ನೀಡಬೇಕು ಮತ್ತು ಅವುಗಳನ್ನು ಗ್ರಾಮ ಪಂಚಾಯತಿಗಳು ಪರಿಶೀಲಿಸಿ ಚೆಕ್ ಮುಖಾಂತರ ಎಸ್ಕ್ರೋ ಖಾತೆಯಿಂದ ಜಮೆ ಮಾಡುತ್ತವೆ ಎಂದು ತಿಳಿಸಿದರು.

3. ಸುದೀರ್ಘವಾಗಿ ಚರ್ಚಿಸಿದ ನಂತರ, ಸಭೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

4. ಸಚಿವ ಸಂಪುಟದ ನಿರ್ಣಯದನುಸಾರ, ದಿನಾಂಕ 01.04.2014 ರಿಂದ ಗ್ರಾಮ ಪಂಚಾಯತಿಗಳ ಚಾಲ್ತಿ ವಿದ್ಯುತ್ ಬಿಲ್‌ನ್ನು ಮಾತ್ರ ಪ್ರಸ್ತುತ ಪಾವತಿಸಲು ಕ್ರಮ ವಹಿಸಬೇಕಾಗಿರುತ್ತದೆ. **ಯಾವುದೇ ಕಾರಣಕ್ಕೂ ದಿನಾಂಕ 31.03.2014ರ ಹಿಂದಿನ ಬಾಕಿಯಾಗಲೀ ಅಥವಾ ಬಡ್ಡಿಯನ್ನಾಗಲೀ ಸದರಿ ಎಸ್ಕಾಂಗಳು ಎಸ್ಕ್ರೋ ಖಾತೆಯ ಹಣದಿಂದ ಪಾವತಿಸಬಾರದು.**

ಕ್ರಮ: ಸಂಬಂಧಪಟ್ಟ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು.

5. ಶಾಸನಬದ್ಧ ಅನುದಾನದ ಶೇ.60 ರಷ್ಟು ಹಾಗೂ ಕೇಂದ್ರ ಹಣಕಾಸು ಆಯೋಗದಿಂದ ಬಿಡುಗಡೆಯಾಗುವ 13ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ ಹಾಗೂ ಸಾಮಾನ್ಯ ನಿರ್ವಹಣಾ ಅನುದಾನದ 25% ರಷ್ಟು ಮೊತ್ತವನ್ನು ಪ್ರತಿ ಗ್ರಾಮ ಪಂಚಾಯತಿಗಳಿಗೆ ಇದಕ್ಕಾಗಿ ಪ್ರತ್ಯೇಕವಾಗುವ ತೆರೆಯಲಾಗಿರುವ ಎಸ್ಕ್ರೋ ಖಾತೆಗಳಿಗೆ ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು ಮತ್ತು ಗ್ರಾಮ ಪಂಚಾಯತಿಗಳು ಈ ಎಸ್ಕ್ರೋ ಖಾತೆಯಿಂದ ಸಂಬಂಧಿಸಿದ ಎಸ್ಕಾಂಗಳಿಗೆ ನಿಗದಿತ ಕಾಲಮಿತಿಯಲ್ಲಿ ವಿದ್ಯುತ್ ಬಿಲ್‌ನ್ನು ಪಾವತಿಸುವುದು ಇದಕ್ಕಾಗಿ ಎಸ್ಕಾಂಗಳು ಗ್ರಾಮ ಪಂಚಾಯತಿಗಳಿಗೆ ಬಿಲ್ಲುಗಳನ್ನು ನೀಡಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಂದ ಚೆಕ್‌ಗಳನ್ನು ಪಡೆಯಬೇಕು.

ಕ್ರಮ: ಸಂಬಂಧಪಟ್ಟ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು

6. ನಿರ್ದೇಶಕರು (ಇ-ಆಡಳಿತ), ನಿರ್ದೇಶಕರು (ಪಂ.ರಾಜ್-1), ಎನ್.ಐ.ಸಿ. ಮತ್ತು ಸಂಬಂಧಪಟ್ಟ ಎಸ್ಕಾಂ ಅಧಿಕಾರಿಗಳನ್ನೊಳಗೊಂಡ ತಂಡವನ್ನು ರಚಿಸಿದ್ದು, ಸದರಿ ತಂಡವು ಸಭೆ ಸೇರಿ ಪಂಚತಂತ್ರ ತಂತ್ರಾಂಶದಲ್ಲಿ ವಿದ್ಯುತ್ ಬಿಲ್ ಕಾಣುವ ರೀತಿಯಲ್ಲಿ ಲಿಂಕ್ ಮಾಡುವ ವ್ಯವಸ್ಥೆ ಮಾಡುವುದು ಮತ್ತು ಎಷ್ಟು ಹಣ ಎಸ್ಕಾಂಗಳಿಗೆ ವರ್ಗಾವಣೆಯಾಗಿದೆ ಎನ್ನುವುದನ್ನು ಆನ್-ಲೈನ್‌ನಲ್ಲಿಯೇ ವೀಕ್ಷಿಸುವಂತೆ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಸುವುದು.

ಕ್ರಮ: ನಿರ್ದೇಶಕರು (ಇ-ಆಡಳಿತ), ಗ್ರಾ.ಅ&ಪಂ.ರಾಜ್ ಇಲಾಖೆ.

7. ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಸಹಾಯಕ ಪ್ರಧಾನ ವ್ಯವಸ್ಥಾಪಕರು ಯಾರ ಹೆಸರಿಗೆ ಚೆಕ್‌ಗಳನ್ನು ಮುದ್ರಿಸಬೇಕು ಎಂದು ಕೇಳಿದಾಗ ಬೆಸ್ಕಾಂನ ನಿರ್ದೇಶಕರು (ಹಣಕಾಸು) ರವರು ಎಲ್ಲಾ ಎಸ್ಕಾಂಗಳ ಜೊತೆ ಆಂತರಿಕವಾಗಿ ಚರ್ಚಿಸಿ ಈ ಬಗ್ಗೆ ಒಂದೆರಡು ದಿನಗಳಲ್ಲಿ ಸ್ಪಷ್ಟೀಕರಣ ನೀಡುವುದು.

ಕ್ರಮ: ನಿರ್ದೇಶಕರು (ಹಣಕಾಸು), ಬೆಸ್ಕಾಂ.

8. ದಿನಾಂಕ 16.04.2015 ರೊಳಗಾಗಿ ಎಸ್.ಬಿ.ಎಂ. ನವರು ಈಗಾಗಲೇ ತೆರೆದಿರುವ ಎಸ್ಕ್ರೋ ಖಾತೆಗೆ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಮಾದರಿ ಸಹಿಯನ್ನು ಪಡೆದು **ದಿನಾಂಕ 17.04.2015 ರಿಂದ ಸಂಬಂಧಿಸಿದ ಖಾತೆಯನ್ನು ಚಾಲನೆಗೊಳಿಸಬೇಕು.**

ಕ್ರಮ: ಸಹಾಯಕ ಪ್ರಧಾನ ವ್ಯವಸ್ಥಾಪಕರು, ಎಸ್.ಬಿ.ಎಂ. (ಜಿ-ಸೇವಾ ಶಾಖೆ).

9. ಚಾಲನೆಯಲ್ಲಿರುವ ಇರುವ ಮತ್ತು ನಿಷ್ಕ್ರಿಯಗೊಂಡಿರುವ ಕುಡಿಯುವ ನೀರಿನ ಸ್ಥಾವರಗಳ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರು, ಎಸ್ಕಾಂ ರವರಿಗೆ ಸಲ್ಲಿಸಿ, ನಿಷ್ಕ್ರಿಯ ಸ್ಥಾವರಗಳ ಸಂಪರ್ಕವನ್ನು ಕಡಿತಗೊಳಿಸಲು

ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಸ್ಕಾಂರವರಿಗೆ ಪ್ರಸ್ತಾವನೆ ಸಲ್ಲಿಸಲು ಎಲ್ಲಾ ಗ್ರಾಮ ಪಂಚಾಯತಿಗಳಿಗೆ ಸೂಚನೆ ನೀಡಲು ಸೂಕ್ತ ಸುತ್ತೋಲೆ ಹೊರಡಿಸುವುದು.

ಕ್ರಮ: ನಿರ್ದೇಶಕರು (ಪಂ.ರಾಜ್-1), ಗ್ರಾ.ಅ&ಪಂ.ರಾಜ್ ಇಲಾಖೆ.

10. ಯಾವುದಕ್ಕೂ ನಿರಂತರವಾಗಿ 12 ತಿಂಗಳಿಗಿಂತ zero consumption ದಾಖಲಾಗಿರುವ ಕುಡಿಯುವ ನೀರಿನ ಸ್ಥಾವರಗಳ ಸಂಪರ್ಕವನ್ನು ಕೂಡಲೇ ಕಡಿತಗೊಳಿಸಲು ತಿಳಿಸಲಾಯಿತು.

ಕ್ರಮ: ಸಂಬಂಧಪಟ್ಟ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು

11. ಎಸ್ಕಾಂಗಳಿಂದ ವಿದ್ಯುತ್ ಬಿಲ್ ಪಡೆದ ಕೂಡಲೇ ಅವುಗಳನ್ನು ಪರಿಶೀಲಿಸಿ ಹಣ ಪಾವತಿಸಲು ಎಲ್ಲಾ ಗ್ರಾಮ ಪಂಚಾಯತಿಗಳು ಕ್ರಮ ವಹಿಸಲು ಸುತ್ತೋಲೆ ಹೊರಡಿಸುವುದು. ವಿದ್ಯುತ್ ಬಿಲ್ ಪಾವತಿ ಮತ್ತು ಬಾಕಿ ಬಗ್ಗೆ ಮಾಹಿತಿಯನ್ನು ಎಸ್ಕಾಂ ವೆಬ್‌ಸೈಟ್ ಜೋಡಣೆ ಮೂಲಕ ಪಂಚತಂತ್ರದಲ್ಲಿ ಅಳವಡಿಸಲು ಕ್ರಮ ವಹಿಸುವ ಬಗ್ಗೆ ಸೂಕ್ತ ಸುತ್ತೋಲೆ ಹೊರಡಿಸುವುದು ಹಾಗೂ ಇದರ ಬಗ್ಗೆ ಸರ್ಕಾರದ ಮಟ್ಟದಲ್ಲಿ ನಿರಂತರವಾಗಿ ಪರಿಶೀಲನೆ ನಡೆಸುವುದು.

ಕ್ರಮ: ನಿರ್ದೇಶಕರು (ಪಂ.ರಾಜ್-1), ಗ್ರಾ.ಅ&ಪಂ.ರಾಜ್ ಇಲಾಖೆ.

12. ಶಾಸನಬದ್ಧ ಅನುದಾನ ತ್ರೈಮಾಸಿಕವಾಗಿ ಬಿಡುಗಡೆ ಮಾಡಲಾಗುತ್ತಿದ್ದು ಹಾಗೂ 13ನೇ ಹಣಕಾಸು ಆಯೋಗದ ಅನುದಾನ ವರ್ಷಕ್ಕೆರಡು ಬಾಕಿ ಬಿಡುಗಡೆ ಮಾಡಲಾಗುತ್ತಿದ್ದು, ಇದರಿಂದ ಪ್ರತಿ ಬಿಲ್ಲಿನ ಮೇಲೆ ಎರಡು ತಿಂಗಳ ವಿದ್ಯುತ್ ಬಿಲ್‌ಗಳಿಗೆ ಬಡ್ಡಿ ಹಾಕಲಾಗುತ್ತಿದೆ. ಇದಕ್ಕಾಗಿ ತ್ರೈಮಾಸಿಕ ಬಿಲ್‌ಗಳನ್ನು ನೀಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸೂಕ್ತ ಮನವಿ ಸಲ್ಲಿಸುವುದು. ಜೊತೆಗೆ ಶಾಸನಬದ್ಧ ಅನುದಾನವನ್ನು ಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲು ಆರ್ಥಿಕ ಇಲಾಖೆಯನ್ನು ಕೋರಲು ಕಡತ ಮಂಡಿಸುವುದು.

ಕ್ರಮ: ನಿರ್ದೇಶಕರು (ಪಂ.ರಾಜ್-1), ಗ್ರಾ.ಅ&ಪಂ.ರಾಜ್ ಇಲಾಖೆ.

13. ನಗರ ಸ್ಥಳೀಯ ಸಂಸ್ಥೆಗಳು ಉಪಯೋಗಿಸುತ್ತಿರುವ ವಿದ್ಯುತ್ ಬಿಲ್‌ನ್ನು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ನೀಡುತ್ತಿರುವ ವಿದ್ಯುತ್ ಬಿಲ್‌ನ್ನು ಕೂಡಲೇ ನಿಲ್ಲಿಸುವುದು ಮತ್ತು ರೀಕನ್ಸೈಲ್ ಮಾಡುವುದು.

ಕ್ರಮ: ಸಂಬಂಧಪಟ್ಟ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು

14. ಬಹು ಗ್ರಾಮ ಯೋಜನೆ (ಎಂ.ವಿ.ಎಸ್) ಗಳಿಗೆ 2-3 ಗ್ರಾಮ ಪಂಚಾಯತಿಗಳಿಗೆ ಸೇರಿ ಒಂದು ವಿದ್ಯುತ್ ಬಿಲ್ ನೀಡಲಾಗುತ್ತಿದೆ. ಇನ್ನು ಮುಂದೆ ಪ್ರತಿ ಗ್ರಾಮ ಪಂಚಾಯತಿವಾರು ಬಿಲ್ಲುಗಳನ್ನು ವಿಂಗಡಿಸಿ

(ನಗರ ಸ್ಥಳೀಯ ಸಂಸ್ಥೆಗಳ ಬಿಲ್ಲುಗಳನ್ನು ಸಹ ವಿಂಗಡಿಸಿ) ಪ್ರತ್ಯೇಕವಾಗಿ ಗ್ರಾಮ ಪಂಚಾಯತಿಗಳಿಗೆ ವಿದ್ಯುತ್ ಬಿಲ್ ನೀಡಬೇಕು. ಬಿಲ್ಲನ್ನು ಯಾವ ಆಧಾರದ ಮೇಲೆ ವಿಂಗಡಿಸಬೇಕೆಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಎಸ್ಕಾಂಗಳಿಗೆ ತಿಳಿಸಲು ಸುತ್ತೋಲೆ ಹೊರಡಿಸುವುದು.

ಕ್ರಮ: ಸಂಬಂಧಪಟ್ಟ ಎಸ್ಕಾಂಗಳ ವ್ಯವಸ್ಥಾಪಕ ನಿರ್ದೇಶಕರುಗಳು ಮತ್ತು ಮುಖ್ಯ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಇಲಾಖೆ.

15. ಸಚಿವ ಸಂಪುಟದ ವಿಷಯ ಸಂ. ಸಿ.15/2015ರ ಟಿಪ್ಪಣಿ ಹಾಗೂ ದಿನಾಂಕ 20.01.2015ರಲ್ಲಿನ ನಿರ್ಣಯದ ಪ್ರತಿ, ಸರ್ಕಾರದ ಆದೇಶ ಸಂ. ಗ್ರಾಅಪ 10 ಗ್ರಾಪಸ 2015, ದಿನಾಂಕ 10.3.2015ರ ಪ್ರತಿಗಳನ್ನು ಸಭೆಯಲ್ಲಿ ಹಾಜರಿದ್ದ ಎಲ್ಲಾ ಎಸ್ಕಾಂ ಅಧಿಕಾರಿಗಳಿಗೆ ನೀಡಲಾಯಿತು.

ವಂದನಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
(ಟಿ.ಎಂ.ವಿಜಯ ಭಾಸ್ಕರ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾ.ಅ&ಪಂ.ರಾಜ್ ಇಲಾಖೆ.

ಸಂ. ಗ್ರಾಅಪ 10 ಗ್ರಾಪಸ 2015

P.Devasahayam
(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ (ಜಿ.ಪಂ) (ಪ್ರ),
ಗ್ರಾ.ಅ&ಪಂ.ರಾಜ್ ಇಲಾಖೆ.

## ಅನುಬಂಧ (ಸಭೆಯಲ್ಲಿ ಹಾಜರಿದ್ದವರು)

1. ಶ್ರೀ ಟಿ.ಎಂ.ವಿಜಯ ಭಾಸ್ಕರ್, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾಜ್ ಇಲಾಖೆ.
2. ಶ್ರೀ ಗಂಗಾರಾಮ್ ಬಡೇರಿಯಾ, ಸರ್ಕಾರದ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾಜ್ ಇಲಾಖೆ.
3. ಶ್ರೀ ಗುರುಪ್ರಸಾದ್, ನಿರ್ದೇಶಕರು (ಹಣಕಾಸು), ಬೆಸ್ಕಾಂ.
4. ಶ್ರೀ ಎಸ್.ಎಂ.ಜುಲ್‌ಫಿಖಾರ್‌ಉಲ್ಲಾ, ನಿರ್ದೇಶಕರು (ಪಂ.ರಾಜ್-2), ಗ್ರಾ.ಅ&ಪಂ.ರಾಜ್ ಇಲಾಖೆ.
5. ಶ್ರೀ ಕೆ.ಯಾಲಕ್ಕಿಗೌಡ, ನಿರ್ದೇಶಕರು (ಪಂ.ರಾಜ್-1), ಗ್ರಾ.ಅ&ಪಂ.ರಾಜ್ ಇಲಾಖೆ.
6. ಶ್ರೀ ಮಹದೇವ, ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ&ಪಂ.ರಾಜ್ ಇಲಾಖೆ.
7. ಶ್ರೀ ಎಸ್.ಶೃಂಗೇಶ್ವರ ಶರ್ಮ, ಸಹಾಯಕ ಪ್ರಧಾನ ವ್ಯವಸ್ಥಾಪಕರು, ಎಸ್.ಬಿ.ಎಂ (ಜಿ-ಸೇವಾ ಶಾಖೆ).
8. ಶ್ರೀ ಎಸ್.ಆರ್.ತೇರದಾಳ್, ಹಣಕಾಸು ಅಧಿಕಾರಿ, ಹೆಸ್ಕಾಂ, ಹುಬ್ಬಳ್ಳಿ.
9. ಶ್ರೀ ಎ.ಶಿವಣ್ಣ, ಹಣಕಾಸು ಅಧಿಕಾರಿ, ಚೆಸ್ಕಾಂ, ಮೈಸೂರು.
10. ಶ್ರೀ ಟಿ.ಹೆಚ್.ಶಕೀಲ್ ಅಹ್ಮದ್, ಹಣಕಾಸು ಅಧಿಕಾರಿ, ಬೆಸ್ಕಾಂ, ಬೆಂಗಳೂರು.
11. ಶ್ರೀ ಆರ್.ಆರ್.ಜೋಶಿ.
12. ಶ್ರೀ ಕೆ.ಜೆ.ಆಳ್ವ, ಹಣಕಾಸು ಅಧಿಕಾರಿ, ಮೆಸ್ಕಾಂ, ಮಂಗಳೂರು.
13. ಶ್ರೀ. ಎಲ್.ಆರ್.ನೀಲ್ಯ ನಾಯಿಕ್, ನಿರ್ದೇಶಕರು (ತಾಂತ್ರಿಕ), ಜೆಸ್ಕಾಂ, ಕಲಬುರಗಿ.
14. ಶ್ರೀ ಕೆ.ಬಾಲಚಂದ್ರ, ಎನ್.ಐ.ಸಿ. ಅಧಿಕಾರಿ, ಕರ್ನಾಟಕ, ಬೆಂಗಳೂರು.